# ಮಹಾದೇವ ಅವತರಿಸಿದ್ದಾನೆ



**ವಿನಯ್ ಗೌಡ**
ಸುವರ್ಣದ 'ಹರ ಹರ ಮಹಾದೇವದ' ಮಹಾದೇವ

★ *'ಮಹಾದೇವ' ಆಗಿದ್ದು ಹೇಗೆ?*

ಆಡಿಷನ್‌ಗೆ ಬಂದಿದ್ದು 'ಮಹಾದೇವ'ನಿಗೆ ಅಲ್ಲ. ಅಸುರ ಪಾತ್ರಕ್ಕೆಂದು ಬಂದಿದ್ದೆ. ನನ್ನ ದಾಡಿ– ದೇಹ ಅದಕ್ಕೆ ಸೂಕ್ತವಾಗಿತ್ತು. ಆಡಿಷನ್ ಆದ ನಾಲ್ಕು ದಿನಕ್ಕೆ ನನಗೆ ಫೋನ್ ಮಾಡಿ ಮತ್ತೆ ಕರೆಯುತ್ತಾರೆ. 'ದೃಷ್ಟಿ ಸಿಕ್ಕಾಪಟ್ಟೆ ಮೊನುಚಾಗಿದೆ. ಏಕೆ ಮಹಾದೇವ ಪಾತ್ರ ನಿರ್ವಹಿಸಬಾರದು?' ಎಂದು ಕೇಳುತ್ತಾರೆ. ಅಲ್ಲದೆ ದಾಡಿ ತೆಗೆಯುವಂತೆ ಸೂಚಿಸುತ್ತಾರೆ. ಇದರ ಜೊತೆ ಒಂದು ಸವಾಲನ್ನು ಹಾಕುತ್ತಾರೆ. 'ತೂಕ ಇಳಿಸಿಕೊಳ್ಳಬೇಕು' ಎಂದು. 112ಕೆಜಿ ತೂಗುತ್ತಿದ್ದ ದೇಹ ಸಪೂರವಾಗಬೇಕು ಎನ್ನುವುದು ತಂಡದ ಅಪೇಕ್ಷೆಯಾಗಿತ್ತು. ಅದಕ್ಕೆ ನಾನು ಒಪ್ಪಿಕೊಂಡು ಒಂದೆರಡು ವಾರಕ್ಕೆ 13 ಕೆ.ಜಿ. ಇಳಿಸಿ ತೋರಿಸಿದೆ. ಈಗ 21ಕೆಜಿ ಇಳಿದಿದೆ. ಸಿಕ್ಸ್ ಪ್ಯಾಕ್ ಮಾಡಿದ್ದೇನೆ.

★ *ತೂಕ ಇಳಿಸಲು ಬಳಸುವ ತಂತ್ರವೇನು?*

ಈ ಮೊದಲು ಪಾತ್ರ ಬಯಸುತ್ತದೆ ಎಂಬ ಕಾರಣಕ್ಕೆ ಮೂರುಬಾರಿ ತೂಕ ಕಡಿಮೆ ಮಾಡಿದ್ದೆ. ಈ ಬಾರಿ ಮನದಾಳದಲ್ಲಿ ಶಿವ ನೆಲೆಗೊಂಡು ಅದರ ಉತ್ಕಟತೆಯನ್ನು ಹೆಚ್ಚಿಸಿದ. ಜಾತಿಯಿಂದ ನಾವು ಗೌಡರು. ವಾರದ ಬಹುತೇಕ ದಿನಗಳಲ್ಲಿ ಮಾಂಸ ತಿನ್ನುವುದು ನನ್ನ ರೂಢಿ. ಅಲ್ಲದೆ ಆಗಾಗ ಮದ್ಯವನ್ನು ಸೇವಿಸುತ್ತಿದ್ದೆ. ಇದು ದೇಹದ ತೂಕವನ್ನು ಮಿತಿಮೀರಿಸಿತ್ತು. ಯಾರ ಒತ್ತಡವೂ ಇಲ್ಲದೆ ನಾನು ಮದ್ಯ– ಮಾಂಸವನ್ನು ತ್ಯಜಿಸಿದೆ. ವರ್ಕ್‌ಔಟ್ ಆರಂಭಿಸಿದೆ. ಅದು ನನ್ನಲ್ಲಿ ಸ್ಫೂರ್ತಿಯನ್ನು ಉಕ್ಕಿಸಿತು. ಅದರ ಪರಿಣಾಮವನ್ನು ಸ್ವತಃ ಅನುಭವಿಸುತ್ತಿದ್ದೇನೆ. ಆಲಸ್ಯ ಎನ್ನುವುದು ಮಾಯವಾಯಿತು. ದಿನವಿಡೀ ಲವಲವಿಕೆ ಮನೆ ಮಾಡಿರುತ್ತದೆ. ಇಂತಹ ಭಾಗ್ಯವನ್ನು ಶಿವನೇ ಕಲ್ಪಿಸಿದ್ದಾನೆ ಎಂಬ ನಂಬಿಕೆಯಲ್ಲಿ ಶಾಶ್ವತವಾಗಿ ಮಾಂಸ– ಮದ್ಯವನ್ನು ಬಿಡಲು ತೀರ್ಮಾನಿಸಿದ್ದೇನೆ. ಧೂಮಪಾನವನ್ನೂ ಕೂಡ. ಮನಸ್ಸಿದ್ದರೆ ಮಾರ್ಗ ಎನ್ನುವುದಕ್ಕೆ ಇದೊಂದು ಸಣ್ಣ ಉದಾಹರಣೆ.

ದೇಹವನ್ನು ಬಗ್ಗಿಸಲು ಕಟ್ಟುನಿಟ್ಟಿನ ಆಹಾರ ಸೇವಿಸಿ, ದೇಹವನ್ನು ದಂಡಿಸುತ್ತೇನೆ. ನನ್ನ ದೇಹಾಕಾರಕ್ಕೆ ಸರಿ ಹೊಂದುವ ವ್ಯಾಯಾಮವನ್ನು ಮಾಡುತ್ತೇನೆ. ಇದಕ್ಕಾಗಿ ಯಾರ ಸಲಹೆ, ಸೂಚನೆಯನ್ನು ಪಡೆಯುವುದಿಲ್ಲ. ವ್ಯಾಯಾಮ ನಿರ್ದೇಶಕರ ಸೂಚನೆ ಬೇರೆಯ ರೀತಿಯದಾಗಿರುತ್ತದೆ ಎಂಬ ಕಾರಣಕ್ಕೆ ನಾನೇ ಏನೇನು ಮಾಡಬೇಕು ಎಂದು ವೇಳಾಪಟ್ಟಿ ಸಿದ್ಧ ಮಾಡಿಕೊಂಡಿದ್ದೇನೆ. ಬೆಳಿಗ್ಗೆ 4.30ಕ್ಕೆ ಎದ್ದರೆ 7ಗಂಟೆವರೆಗೆ ದೇಹವನ್ನು ದಂಡಿಸುತ್ತೇನೆ. 9ಗಂಟೆಗೆ ಶೂಟಿಂಗ್ ಆರಂಭವಾಗುತ್ತದೆ. ಅದಕ್ಕೂ ಮುನ್ನ 30 ನಿಮಿಷ ಧ್ಯಾನ ಮಾಡುತ್ತೇನೆ. ಆಮೇಲೆ ಕ್ಯಾಮೆರಾ ಮುಂದೆ ಎದುರಾದರೆ ನಟಿಸುತ್ತಿದ್ದೇನೆ ಎನ್ನುವ ಭಾವವೇ ಬರುವುದಿಲ್ಲ. ಮಹಾದೇವನೇ ಅವತರಿಸಿದಂತೆ ತಲ್ಲೀನನಾಗುತ್ತೇನೆ. ನಟನೆ ಎನ್ನುವುದೂ ಸರಳ ಎನ್ನಿಸುತ್ತಿದೆ.

★ *ಸಿನಿಮಾಕ್ಕೆ ಏಕೆ ಬರಲಿಲ್ಲ?*

ಕನ್ನಡದ 'ರೊಕೊ'ಕ್ಕೆ ಅವಕಾಶ ಸಿಕ್ಕಿತ್ತು. ನನಗೆ ಹೀರೋಯಿಸಂ ಇಷ್ಟ ಇಲ್ಲ. ಆಗ ನಾನು ಬಯಸಿದ್ದು ವಿಲನ್ ಪಾತ್ರವನ್ನು. ಅದಾಗಿ ತೆಲುಗು, ತಮಿಳಿಗೆ ಒಂದೆರಡು ಅವಕಾಶ ಬಂದರೂ ಹೋಗಲು ಆಗಲಿಲ್ಲ. ಅಂದರೆ ಟಿವಿ ಅಷ್ಟು ಹಿಡಿದಿಟ್ಟುಕೊಂಡಿತ್ತು. ಮುಂದೆ ಮಾಡುವ ಆಶೆ ಇದೆ. ಇನ್ನೂ ಎರಡು ವರ್ಷ ಮಾತನಾಡುವಂತಿಲ್ಲ. ಈಗ ಮುಂಬೈಯಲ್ಲೇ ಇರಬೇಕು. 'ಮಹಾದೇವ' ಮುಗಿದ ನಂತರ ಈ ಬಗ್ಗೆ ಯೋಚಿಸುತ್ತೇನೆ.

★ *ಮಹಾದೇವದ ಪಾತ್ರವನ್ನು ಹೇಗೆ ಅನುಭವಿಸುತ್ತಿದ್ದೀರಿ?*

ಪೌರಾಣಿಕ ಪಾತ್ರ. ಇದಕ್ಕೆ ಮುಖ್ಯವಾಗಿ ಭಾಷಾ ಸ್ಪಷ್ಟತೆ ಇರಬೇಕು. ಸ್ಪಷ್ಟವಾಗದಿದ್ದರೆ ಮತ್ತೆ ರೀ ಶೂಟ್ ಮಾಡುತ್ತಾರೆ. ಇಲ್ಲಿನ ಕಥೆ ನಾವು ಅಂದುಕೊಂಡಿದ್ದಕ್ಕಿಂತ ಭಿನ್ನವಾಗಿದೆ. ಇಲ್ಲಿ ಶಿವನಿಗೆ ದಾಡಿ ಇಲ್ಲ. ಪಾರ್ವತಿಗಿಂತ ಮುಂಚೆ ಆತ ಸತಿಯನ್ನು ಮದುವೆಯಾಗಿದ್ದ. ಇನ್ನೂ ಕಥೆಯಲ್ಲಿ ಮೂರನೇ ಕಣ್ಣು ಬಂದಿಲ್ಲ. ಹೀಗೆ ಪ್ರತಿಯೊಂದಕ್ಕೂ ಬೇರೆಯದೇ ಕಥೆಗಳಿವೆ. ಅದನ್ನು ಕ್ರಮವಾಗಿ ತೋರಿಸುವ ಪ್ರಯತ್ನ ಇಲ್ಲಿದೆ. ಅಲ್ಲದೆ ಶಿವನೇಕೆ ಶಶಿಧರನಾದ, ಅವನ ತಲೆಯಲ್ಲಿ ಗಂಗೆ ಏಕೆ ನೆಲೆಸಿದಳು ಎನ್ನುವ ಸಂದರ್ಭಗಳು ಮನೋಜ್ಞವಾಗಿ ತೆರೆಯಲ್ಲಿ ಕಾಣಲಿವೆ. ನಾನೂ ಕೂಡ ಸಾರ್ವಜನಿಕವಾಗಿ ಕಾಣುತ್ತಿಲ್ಲ. ಮಗನನ್ನು ಮಿಸ್ ಮಾಡಿಕೊಳ್ಳುತ್ತಿದ್ದೇನೆ. ಆಗಾಗ ಫೋನ್‌ನಲ್ಲಿ ಮಾತಾಡುತ್ತೇನೆ. ಅವಕಾಶ ಸಿಕ್ಕಾಗ ಒಂದು ದಿನ ಬೆಂಗಳೂರಿಗೆ ಬರುತ್ತೇನೆ.

■ ರಾಗು